LAND10005301


No KB-ALN-II-CR 202/2018-19

# ಜಿಲ್ಲಾಧಿಕಾರಿಗಳ ಕಾರ್ಯಾಲಯ ಉತ್ತರ ಕನ್ನಡ ಜಿಲ್ಲೆ

ಸಂಖ್ಯೆ : LAND10005301

ದಿನಾಂಕ : 02/08/2018

## ಅಧಿಕೃತ ಜ್ಞಾಪನ



ವಿಷಯ : ಉತ್ತರ ಕನ್ನಡ ಜಿಲ್ಲೆ ಸಿರ್ಸಿ ತಾಲ್ಲೂಕು ಶಿರಸಿ ಹೋಬಳಿ ಬಚಗಾಂವ ಗ್ರಾಮದ ಸ.ನಂ: 50/*/1 ರಲ್ಲಿ 5.30.0.00 ಎಕರೆ ಗುಂಟೆ ವಿಸ್ತೀರ್ಣದ ವ್ಯವಸಾಯದ ಜಮೀನನ್ನು ವ್ಯವಸಾಯೇತರ ವಸತಿ - ವೈಯಕ್ತಿಕ ಉದ್ದೇಶಕ್ಕಾಗಿ ಭೂ ಪರಿವರ್ತನೆ ಕೋರಿ ಶ್ರೀ ಹಿಫ್ಜುರಹಮಾನ ಅಬ್ದುಲ್ ವಾಹೀದ ಮಾಯಿನಳ್ಳಿ , ರವರು ಸಲ್ಲಿಸಿರುವ ಅರ್ಜಿ ದಿನಾಂಕ 28/03/2018

ಉಲ್ಲೇಖ : 1. ತಹಶೀಲ್ದಾರರು. ಸಿರ್ಸಿ ತಾಲ್ಲೂಕು. ರವರ ಪತ್ರ ಸಂಖ್ಯೆ: ನಂ.ಎಎಲ್ ಎನ್/ಸಿಆರ್/1/18-19 ದಿನಾಂಕ: 08/06/2018.

2. ಭೂ ಪರಿವರ್ತನಾ ಶುಲ್ಕ ರೂ 125350 ಪೋಡಿ ಶುಲ್ಕ ರೂ 35 ದಂಡ ಶುಲ್ಕ ರೂ 0 ಹಾಗೂ ಖರಾಬು ಶುಲ್ಕ ರೂ. 0 ಒಟ್ಟು ರೂ. 125385 ಗಳನ್ನು ಡಿ. ಡಿ ಚಲನ್ ನಂ: 062786129 ದಿನಾಂಕ 26/07/2018 ರಂದು ಖಜಾನೆಗೆ ಅರ್ಜಿದಾರರು ಜಮಾ ಮಾಡಿರುತ್ತಾರೆ.

****************

ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ರ ಕಲಂ 95 (2). 95(4) ಮತ್ತು 95(7) ರ ಷರತ್ತುಗಳು ಹಾಗೂ ಈ ಕೆಳಕಾಣಿಸಿದ ಷರತ್ತುಗೊಳಪಡಿಸಿ, ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ನಿಯಮಗಳು 1994 ರ ನಿಯಮ 107(1) ರಂತೆ ಎಕರೆ ಒಂದಕ್ಕೆ ರೂ 21800.0000 (ರೂಪಾಯಿಗಳು ಇಪ್ಪತ್ತು ಒಂದು ಸಾವಿರ ಎಂಟು ನೂರು ರೂಪಾಯಿಗಳು ಮಾತ್ರ )ಗಳಂತೆ ಅರ್ಜಿದಾರರು ಉಲ್ಲೇಖ(2) ರಲ್ಲಿ ನಮೂದಿಸಿರುವಂತೆ ಹಣವನ್ನು ಜಮಾ ಮಾಡಿದ ಮೇರೆಗೆ ಅರ್ಜಿದಾರರಾದ ಶ್ರೀ ಹಿಫ್ಜುರಹಮಾನ ಅಬ್ದುಲ್ ವಾಹೀದ ಮಾಯಿನಳ್ಳಿ , ರವರ ಅರ್ಜಿಯನ್ನು ಪರಿಗಣಿಸಿ ಶಿರಸಿ ಹೋಬಳಿ ಬಚಗಾಂವ ಗ್ರಾಮದ ಸ.ನಂ: 50/*/1 ರಲ್ಲಿ 5.30.0.00 ರಲ್ಲಿನ ಒಟ್ಟು 5.30.0.00 ಎಕರೆ ಗುಂಟೆ ವಿಸ್ತೀರ್ಣದ ವ್ಯವಸಾಯದ ಜಮೀನನ್ನು ವ್ಯವಸಾಯೇತರ ವಸತಿ | ವೈಯಕ್ತಿಕ ಉದ್ದೇಶಕ್ಕಾಗಿ ಬಳಸಲು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಭೂ ಪರಿವರ್ತನಾ ಆದೇಶವನ್ನು ಹೊರಡಿಸಲಾಗಿದೆ.

1 ಈ ಭೂಮಿಯು ಯಾವ ಉದ್ದೇಶಕ್ಕಾಗಿ ಪರಿವರ್ತನೆಯಾಗಿದೆಯೋ ಆ ಉದ್ದೇಶಕ್ಕೆ ಉಪಯೋಗಿಸಿಕೊಳ್ಳಲು ಸಕ್ಷಮ ಪ್ರಾಧಿಕಾರಿಯಿಂದ. ಅಂದರೆ/ಅಭಿವೃದ್ಧಿ ಮಂಡಳಿ /ಸಿಎಂಸಿ/ಟಿಎಂಸಿ/ಮಾಲಿನ್ಯ ನಿಯಂತ್ರಣ ಮಂಡಳಿ/ಗ್ರಾಮ ಪಂಚಾಯಿತಿಗಳಿಂದ ಮಂಜೂರಾತಿಯನ್ನು ಪಡೆಯದ ಹೊರತು ಈ .ಆದೇಶವು ಅನುಭವದಾರನಿಗೆ ಯಾವುದೇ ಹಕ್ಕನ್ನು ನೀಡುವುದಿಲ್ಲ.

2. ಈ ಭೂಪರಿವರ್ತಿತ ಜಮೀನನ್ನು ವಸತಿ | ವೈಯಕ್ತಿಕ ಉದ್ದೇಶಕ್ಕಾಗಿ ಮಾತ್ರ ಉಪಯೋಗಿಸಿಕೊಳ್ಳತಕ್ಕದ್ದು. ಈ ಜಮೀನನ್ನು ಪೂರ್ವಾನುಮತಿ ಇಲ್ಲದೆ ಬೇರೆ ಉದ್ದೇಶಕ್ಕಾಗಿ ಉಪಯೋಗಿಸಬಾರದು.

3. ಈ ಜಮೀನಿನಲ್ಲಿ ಉದ್ದೇಶಿಸಿರುವ ಬಡಾವಣೆ ನಕ್ಷೆ ಹಾಗೂ ಪರವಾನಗಿ ಇತ್ಯಾದಿಗಳನ್ನು ಹೆಚ್ಚುವರಿ ನಿರ್ದೇಶಕರು,ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ ಧಾರವಾಡ (ಪ್ರಾಧಿಕಾರ / ನಗರಪಾಲಿಕೆ ಇತ್ಯಾದಿ) ರವರಿಂದ ಅನುಮೋದಿಸಿಕೊಂಡು. ಆ ನಂತರ ಅನುಮೋದನೆಗೊಂಡ ನಕ್ಷೆಗೆ ಅನುಗುಣವಾಗಿ ಕಟ್ಟಡವನ್ನು ಕಟ್ಟುವುದು. ಸದರಿ ಜಮೀನಿನಲ್ಲಿ ಲೇಔಟ್ ಪ್ಲಾನಿಗೆ ಅನುಮೋದನೆ ಪಡೆಯದೆ ಪರಭಾರೆ ಮಾಡಕೂಡದು

4. ಇತರೆ ಅವಶ್ಯವಾದ ರಸ್ತೆ ಜಾಗ. ರಸ್ತೆ ಮಾರ್ಜಿನ್. ಖಾಲಿ ಜಾಗ ಇತ್ಯಾದಿಗಳನ್ನು (ಪ್ರಾಧಿಕಾರ / ನಗರಪಾಲಿಕೆ/ಇತ್ಯಾದಿ ) ರವರಿಂದ ಅನುಮೋದಿಸಿದ ಬಡಾವಣೆ ನಕ್ಷೆ ಪ್ರಕಾರ ಹಾಗೂ ನಿರ್ದಿಷ್ಟಪಡಿಸಿದ ನಿಯಮಗಳ ರೀತ್ಯ ಸದರಿ ಉದ್ದೇಶಕ್ಕಾಗಿ ಕಾಯ್ದಿರಿಸತಕ್ಕದ್ದು.

5. ಸಾರ್ವಜನಿಕ ಹಿತದೃಷ್ಟಿಯಿಂದ ಸದರಿ ಜಮೀನಿನಲ್ಲಿ ನಿವೇಶನದಾರರಿಗೆ ನಾಗರೀಕ ಸೌಲಭ್ಯಗಳಾದ ವಿದ್ಯುಚ್ಛಕ್ತಿ, ನೀರು ಸರಬರಾಜು ಒಳಚರಂಡಿ ವ್ಯವಸ್ಥೆ, ಇತ್ಯಾದಿಗಳನ್ನು ಆರೋಗ್ಯ ನೈರ್ಮಲ್ಯೀಕರಣ ಹಾಗೂ ಭದ್ರತೆಗಳ ಉದ್ದೇಶದಿಂದ ಎಲ್ಲಾ ಸೌಲಭ್ಯಗಳನ್ನು ಕಾನೂನು ರೀತ್ಯ ಒದಗಿಸಿಕೊಡುವುದು ಅರ್ಜಿದಾರರ ಜವಾಬ್ದಾರಿಯಾಗಿರುತ್ತದೆ.

6. ಸರ್ಕಾರದ ಆದೇಶ ಸಂ:ಪಿಡಬ್ಲ್ಯೂ.ಡಿ 7556-665-ಆರ್ ಮತ್ತು ಬಿ-6-54-5 ಮತ್ತು ಕೇಂದ್ರ ಸರ್ಕಾರದ ಸಾರಿಗೆ ಇಲಾಖೆಯ ಪತ್ರ ನಂ ಪಿ1:7(11)67. ದಿನಾಂಕ:1-1-1966 ರಂತೆ ಈ ಜಮೀನಿನಲ್ಲಿ ಕಟ್ಟಲು ಉದ್ದೇಶಿಸಿರುವ ಕಟ್ಟಡವು ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿಗೆ ಸಂಬಂಧಿಸಿದಂತೆ ರಸ್ತೆಯ ಮಧ್ಯಭಾಗದಿಂದ 40 ಮೀಟರ್ ಗಳ ಅಂತರವನ್ನು ಮತ್ತು ಜಿಲ್ಲಾ ಹೆದ್ದಾರಿಗೆ ಸಂಬಂಧಿಸಿದಂತೆ ರಸ್ತೆಯ ಮಧ್ಯಭಾಗದಿಂದ 25 ಮೀಟರ್ ಗಳ ಅಂತರವನ್ನು ಕಾಯ್ದಿರಿಸಬೇಕು ಹಾಗೂ ಈ ಖಾಲಿ ಪ್ರದೇಶದಲ್ಲಿ ಯಾವುದೇ ಕಟ್ಟಡವನ್ನು ಕಟ್ಟಬಾರದು.

7. ಅರ್ಜಿದಾರರು ನಗರ ಭೂ ಪರಿಮಿತಿ ಕಾಯಿದೆ 1976 ವಿಧಿ 6(1) ರ ಪ್ರಕಾರ ಸಕ್ಷಮ ಪ್ರಾಧಿಕಾರದಲ್ಲಿ ಘೋಷಣೆ ಪತ್ರವನ್ನು ಸಲ್ಲಿಸದಿದ್ದಲ್ಲಿ ಈಗ ತಕ್ಷಣ ಅಂತಹ ಘೋಷಣೆ ಪತ್ರವನ್ನು ಸಲ್ಲಿಸತಕ್ಕದ್ದು ಮತ್ತು ಈ ಆದೇಶದ ಪ್ರತಿಯನ್ನು ಸಂಬಂಧಪಟ್ಟ ಭೂ ಪರಿಮಿತಿ ಪ್ರಾಧಿಕಾರಕ್ಕೆ ಕಳುಹಿಸಲಾಗಿದೆ.

8. ಈ ಭೂ ಪರಿವರ್ತನಾ ಜಮೀನಿನಲ್ಲಿ ಸ್ಥಾಪಿಸಲಾಗುವ ಕೈಗಾರಿಕಾ ಘಟಕಗಳ ಹೊಗೆ ಅನಿಲ ಇತರ ಕಲ್ಮಶಗಳನ್ನು ಪರಿಣಾಮಕಾರಿಯಾಗಿ ತಡೆಗಟ್ಟಿ ಸಾರ್ವಜನಿಕರ ಆರೋಗ್ಯಕ್ಕೆ ಯಾವುದೇ ರೀತಿಯ ಹಾನಿಯಾಗದಂತೆ ಹಾಗು ಪರಿಸರ ಮಾಲಿನ್ಯವಾಗದಂತೆ ನೋಡಿಕೊಳ್ಳತಕ್ಕದ್ದು. ಕೈಗಾರಿಕಾ ಉದ್ದೇಶಕ್ಕಾಗಿ ಭೂ ಪರಿವರ್ತಿತ ಜಮೀನಿನಲ್ಲಿ ಸ್ಥಾಪಿಸುವ ಕೈಗಾರಿಕಾ ಘಟಕಗಳು ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ/ಪರಿಸರ ಇಲಾಖೆಗಳ ಅನುಮತಿ ಹೊಂದಿರತಕ್ಕದ್ದು.

9. ಮೇಲ್ಕಂಡ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಈ ಭೂ ಪರಿವರ್ತನೆ ಆದೇಶ ಯಾವುದೇ ಸೂಚನೆ ನೀಡದೆ ರದ್ದುಗೊಳಿಸಲಾಗುವುದು ಮತ್ತು ಕರ್ನಾಟಕ ಭೂಕಂದಾಯ ಕಾಯ್ದೆ 1964 ರ ಕಲಂ 96 ರಂತೆ ದಂಡ ಶುಲ್ಕವನ್ನು ವಿಧಿಸಲು ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು. ಅಲ್ಲದೇ ಈ ಜಮೀನಿನಲ್ಲಿ ಅನಧಿಕೃತವಾಗಿ ಕಟ್ಟಿದ ಕಟ್ಟಡಗಳನ್ನು ಯಾವುದೇ ಪರಿಹಾರ ನೀಡದೇ ತೆರವುಗೊಳಿಸಲು ಕ್ರಮ ತೆಗೆದುಕೊಳ್ಳಲಾಗುವುದು. ಹಾಗೂ ಅದಕ್ಕೆ ತಗಲುವ ವೆಚ್ಚವನ್ನು ಭೂಕಂದಾಯ ಬಾಕಿ ಎಂದು ಖಾತೆದಾರರಿಂದ ವಸೂಲಿ ಮಾಡಲಾಗುವುದು.

<u>ಷೆಡ್ಯೂಲ್ ವಿವರ</u>

ಉತ್ತರ ಕನ್ನಡ ಜಿಲ್ಲೆ ಸಿರ್ಸಿ ತಾಲ್ಲೂಕು ಶಿರಸಿ ಹೋಬಳಿ, ಬಚಗಾಂವ ಗ್ರಾಮದ ಸ.ನಂ: 50/*/1 ರಲ್ಲಿ 5.30.0.00, ಎಕರೆ :ಗುಂಟೆ [illegible] ಪರಿವರ್ತಿತ ಜಮೀನಿಗೆ ಚಕ್ಕುಬಂದಿ.

| ಸ.ನಂ | ವಿಸ್ತೀರ್ಣ | ಚಕ್ಕುಬಂದಿ | | | |
|---|---|---|---|---|---|
| | | ಪೂರ್ವಕ್ಕೆ | ಪಶ್ಚಿಮಕ್ಕೆ | ಉತ್ತರಕ್ಕೆ | ದಕ್ಷಿಣಕ್ಕೆ |
| 50/*/1 | 5.30.0.00 | ಲಾ ನಂ 47 | ಲಾ ನಂ 51 | ಲಾ 38 | ಲಾ ಹಿ ನಂ |

DC Name :
S S NAKUL

ಸಹಿ/-

ಜಿಲ್ಲಾಧಿಕಾರಿ,

ಉತ್ತರ ಕನ್ನಡ ಜಿಲ್ಲೆ,

ಪ್ರತಿಯನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಕೆಳಕಂಡವರಿಗೆ ಕಳುಹಿಸಿದೆ :

1. ತಹಶೀಲ್ದಾರ್ ಸಿರ್ಸಿ ರವರಿಗೆ ಮೂಲ ಕಡತ ಹಾಗೂ ಚಲನ್ ನೊಂದಿಗೆ ಕಳುಹಿಸುತ್ತಾ ಈ ಆದೇಶದ ಪ್ರಕಾರ ಸಂಬಂಧಪಟ್ಟ ಸರ್ವೇ ನಂಬರ್ ಭೂ ಪರಿವರ್ತನೆಯಾಗಿದೆ ಎಂದು ಸಂಬಂಧಪಟ್ಟ ಆರ್.ಟಿ.ಸಿ ಯಲ್ಲಿ ನಮೂದಿಸತಕ್ಕದ್ದು ಮತ್ತು ಈ ಜಮೀನಿಗೆ ಖಾತೇದಾರರ ಲೆಕ್ಕದಲ್ಲಿ ಸದರಿ ಜಮೀನಿನ ಭೂ ಕಂದಾಯವನ್ನು ಕಡಿಮೆ/ಗೊಳಿಸುವುದು.

2. ಹೆಚ್ಚುವರಿ ನಿರ್ದೇಶಕರು,ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ ಧಾರವಾಡ (ಪ್ರಾಧಿಕಾರ/ನಗರಪಾಲಿಕೆ) ಇವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.

3. ಉಪ ವಿಭಾಗಧಿಕಾರಿಗಳು, Sirsi ಉಪ ವಿಭಾಗ.

4. ಉಪ ನಿರ್ದೇಶಕರು, ಭೂಮಾಪನ ಮತ್ತು ಭೂದಾಖಲೆಗಳ Sirsi ಉಪ ವಿಭಾಗ.

5. ಅರ್ಜಿದಾರರಾದ ಹಿಫ್ಜುರಹಮಾನ ಅಬ್ದುಲ್ ವಾಹೀದ ಮಾಯಿನಳ್ಳಿ , ರವರಿಗೆ ದೃಡೀಕೃತ ಅಂಚೆ ಮೂಲಕ.

6. ಹೆಚ್ಚಿನ ಪ್ರತಿ.

TAHASHILDAR SIRSI, TALUKA SIRSI (U.K.) ತಹಶೀಲ್ದಾರ್ ಶಿರಸಿ ತಾ. ಶಿರಸಿ

**ಯಥಾ ನಕಲು**

ಆರ್.ಕೆ.ಎಲ್.ವಿವ / 2162/21-22

ದಿನಾಂಕ 4/10/21 ಶಬ್ದ ಸಂಖ್ಯೆ 200

ದಿನಾಂಕ 4/10/21 ನಕಲು ಫೀ 17

ನಕಲು ಪಡೆದ ದಿನಾಂಕ 21/10/21 ಮೋಕಾಬಿಲ ಫೀ

ನಕಲುಗಳು ಕಾಗದ ಫೀ

ನಕಲು ಬಿಲ್‌ಗಾರ ಒಟ್ಟು ರೂ 17

ಶಿರಸ್ತೇದಾರರು

ತಹಶೀಲ್ದಾರರ ಕಛೇರಿ, ಶಿರಸಿ

ಕರ್ನಾಟಕ ಸರ್ಕಾರ

ನೋಂದಣಿ ಮತ್ತು ಮುದ್ರಾಂಕ ಇಲಾಖೆ

ಸಂಖ್ಯೆ: ನೋ.ಮು/ಸಿವಿಸಿ/190/2019-20

ನೋಂದಣಿ ಮಹಾಪರಿವೀಕ್ಷಕರು ಮತ್ತು
ಮುದ್ರಾಂಕಗಳ ಆಯುಕ್ತರವರ ಕಛೇರಿ,
ಕಂದಾಯ ಭವನ, 8ನೇ ಮಹಡಿ,
ಕೆ.ಜಿ. ರಸ್ತೆ, ಬೆಂಗಳೂರು.
ದಿನಾಂಕ:06-01-2020.

digrcvc@gmail.com;

## ಜ್ಞಾಪನ

ವಿಷಯ: ಉತ್ತರ ಕನ್ನಡ ಜಿಲ್ಲಾನೋಂದಣಿ ಕಛೇರಿ ಶಿರಸಿ ಉಪನೋಂದಣಿ ಕಛೇರಿ ವ್ಯಾಪ್ತಿಯ ಬಚಗಾಂವ ಗ್ರಾಮದಲ್ಲಿ ರಚಿಸಿರುವ ಹೊಸ ವಸತಿ ಬಡಾವಣೆಗೆ ಹೊಸದಾಗಿ ಮಾರ್ಗಸೂಚಿ ದರ ನಿಗದಿಪಡಿಸುವ ಬಗ್ಗೆ.

ಉಲ್ಲೇಖ: ಜಿಲ್ಲಾನೋಂದಣಿ ಕಛೇರಿ ಉತ್ತರ ಕನ್ನಡ ರವರ ಪತ್ರ ಸಂಖ್ಯೆ: ಜಿನೋ/ನೋಂದಣಿ/6/2019-20, ದಿನಾಂಕ 15-07-2019

-*******-

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಲ್ಲಿ ಉತ್ತರ ಕನ್ನಡ ಜಿಲ್ಲಾನೋಂದಣಿ ಕಛೇರಿ, ಶಿರಸಿ ಉಪನೋಂದಣಿ ಕಛೇರಿ ವ್ಯಾಪ್ತಿಯಲ್ಲಿ ಬರುವ ಬಚಗಾಂವ ಗ್ರಾಮದಲ್ಲಿ ಹೊಸದಾಗಿ ರಚಿಸಿರುವ ಹೊಸ ವಸತಿ ಬಡಾವಣೆಗೆ (ಬಚಗಾಂವ ಗ್ರಾಮದ ಸರ್ವೇ ನಂ.50/1 ರಲ್ಲಿ ಒಟ್ಟು ವಿಸ್ತೀರ್ಣ 5 ಎಕರೆ 30 ಗುಂಟೆ) 2018-19ನೇ ಸಾಲಿನ ಮಾರ್ಗಸೂಚಿ ದರಪಟ್ಟಿಯಲ್ಲಿ ಹೊಸದಾಗಿ ದರ ನಿಗದಿಪಡಿಸಲು ಜಿಲ್ಲಾನೋಂದಣಾಧಿಕಾರಿಗಳು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸದರಿ ಬಡಾವಣೆ ಪ್ರಸ್ತಾವನೆಗೆ ಸಂಬಂಧಿಸಿದಂತೆ ಈ ಕೆಳಕಂಡ ದಾಖಲೆಗಳನ್ನು ಸಲ್ಲಿಸಲಾಗಿರುತ್ತದೆ.

1. ನಗರ ಮತ್ತು ಗ್ರಾಮಾಂತರ ಯೋಜನೆ ಇಲಾಖೆ, ಕಾರವಾರ ರವರಿಂದ ಅನುಮೋದಿತ ವಸತಿ ವಿನ್ಯಾಸ ನಕ್ಷೆ.
2. ಜಿಲ್ಲಾನೋಂದಣಾಧಿಕಾರಿಗಳು ಉತ್ತರ ಕನ್ನಡ ರವರ ಸ್ಥಳ ಪರಿಶೀಲನಾ ವರದಿ ಮತ್ತು ಶಿಫಾರಸ್ಸು.

ಪ್ರಸ್ತಾವನೆಯಲ್ಲಿನ ದಾಖಲೆಗಳನ್ನು ಪರಿಶೀಲಿಸಲಾಗಿ, ಜಿಲ್ಲಾನೋಂದಣಾಧಿಕಾರಿಗಳು ಉತ್ತರ ಕನ್ನಡ ರವರ ಸ್ಥಳ ಪರಿಶೀಲನಾ ವರದಿ, ಶಿಫಾರಸ್ಸಿನಂತೆ ಹೊಸ ವಸತಿ ಬಡಾವಣೆಗೆ ನಿವೇಶನ ದರ ರೂ.2000/- ಪ್ರತಿ ಚ.ಮೀಗೆ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ತಾತ್ವಿಕ ಅನುಮೋದನೆ ನೀಡಲಾಗಿದೆ.

| ಕ್ರ.ಸಂ | ಬಡಾವಣೆ ಹೆಸರು/ಪ್ರದೇಶ/ಸರ್ವೆ ನಂ (ಹೊಸ ಸೇರ್ಪಡೆ) | ಮಾರ್ಗಸೂಚಿ ದರ |
|---|---|---|
| 1. | ಹೊಸ ವಸತಿ ಬಡಾವಣೆಗೆ (ಬಚಗಾಂವ ಗ್ರಾಮದ ಸರ್ವೇ ನಂ.50/1 ರಲ್ಲಿ ಒಟ್ಟು ವಿಸ್ತೀರ್ಣ 5 ಎಕರೆ 30 ಗುಂಟೆ) (ಸಕ್ಷಮ ಪ್ರಾಧಿಕಾರದಿಂದ ಅನುಮೋದಿತ ನಕ್ಷೆಯಂತೆ ಬಿಡುಗಡೆ ಮಾಡಿರುವ ನಿವೇಶನಗಳಿಗೆ ಮಾತ್ರ) | ವಸತಿ ನಿವೇಶನ ದರ ರೂ.2000/- ಪ್ರತಿ ಚ.ಮೀ |

.....2

ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಗೊಂಡ ನಕ್ಷೆಯಲ್ಲಿನ ವಸತಿ ನಿವೇಶನಗಳಿಗೆ ಮಾತ್ರ ಸೀಮಿತಗೊಂಡಂತೆ, 2018-19 ನೇ ಸಾಲಿನ ಮಾರ್ಗಸೂಚಿ ದರಪಟ್ಟಿಯ ಅಧಿಸೂಚನೆಯಲ್ಲಿ ಪ್ರಕಟಣೆಗೊಂಡಿರುವ ವಿಶೇಷ ಸೂಚನೆಗಳನ್ವಯ ವಾಣಿಜ್ಯ ಉದ್ದೇಶದ ಮತ್ತು ಇತರೆ ಪ್ರತ್ಯೇಕ ಹೆಚ್ಚುವರಿ ದರಗಳನ್ನು ನಿಯಮಾನುಸಾರ ಭರಿಸಿಕೊಳ್ಳತಕ್ಕದ್ದು. ರೇರಾ ಕಾಯ್ದೆ ನಿಯಮಗಳನ್ನು ಪಾಲಿಸುವ ಮತ್ತು ನೋಂದಣಿ ಮಾಡಿಸುವ ಷರತ್ತಿಗೆ ಒಳಪಟ್ಟಿದೆ.

ಸದರಿ ಜ್ಞಾಪನವನ್ನು ಉಲ್ಲೇಖದನ್ವಯ ಕ್ರಮ ಜರುಗಿಸಿದ್ದು, ಸದರಿ ದರಗಳು ಸಿವಿಸಿ ನಿಯಮಗಳು 2003 ರನ್ವಯ ಕ್ರಮ ಜರುಗಿಸಿ ಉಪ-ಸಮಿತಿಯಲ್ಲಿ ಮಂಡಿಸಿ, ಸಾರ್ವಜನಿಕರ ಆಕ್ಷೇಪಣೆಗಳ ಪರಿಶೀಲನೆಯ ಷರತ್ತಿಗೆ ಒಳಪಟ್ಟಿದ್ದು ಮತ್ತು ಕೇಂದ್ರ ಮೌಲ್ಯಮಾಪನ ಸಮಿತಿಯ ಅಂತಿಮ ಅನುಮೋದನೆ ಪಡೆದು 2018-19 ನೇ ಸಾಲಿನ ರಾಜ್ಯಪತ್ರದಲ್ಲಿ ಅಧಿಸೂಚನೆಯನ್ನು (ಹೊಸ ಸೇರ್ಪಡೆ) ಹೊರಡಿಸಬೇಕಾಗಿರುತ್ತದೆ.

(ಕ.ಟಿ.: ಐನ್ನು ಮಾನ್ಯ ಅಧ್ಯಕ್ಷರು ಸಿವಿಸಿ ರವರಿಂದ ಅನುಮೋದಿಸಲ್ಪಟ್ಟಿದೆ).

ಸದಸ್ಯ ಕಾರ್ಯದರ್ಶಿಗಳು ಹಾಗೂ 6/1/2020
ನೋಂದಣಿ ಉಪಮಹಾಪರಿವೀಕ್ಷಕರು
(ಪ್ರಭಾರ) ಸಿವಿಸಿ, ಬೆಂಗಳೂರು.

ಇವರಿಗೆ,

ಜಿಲ್ಲಾನೋಂದಣಾಧಿಕಾರಿಗಳು ಉತ್ತರ ಕನ್ನಡ ಮತ್ತು ಉಪನೋಂದಣಾಧಿಕಾರಿಗಳು ಶಿರಸಿ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.